**ಓ.ಎಸ್. ನಂ. 69/2018** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 16.1.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಸಿ.ಎಸ್ ವಕೀಲರಿಂದಃ**

ನಿಪಿ24 ರ ಪಹಣಿಯು ಈ ದಾವೆ ಸಲ್ಲಿಸುವ ಸಮಯದಲ್ಲಿ ಚಾಲ್ತಿಯಲ್ಲಿರಲಿಲ್ಲ ಎಂದರೆ ಸಾಕ್ಷಿದಾರರು ತಿಮ್ಮಯ್ಯನ ಅಕ್ಕನ ಮಗ ಬಸವರಾಜು ಎಂಬುವವರು ಪಹಣಿಯನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ ಎನ್ನುವರು. ನಿಪಿ25 ಮತ್ತು ನಿಪಿ36 ರಲ್ಲಿ ಹೇಳಿರುವ ವ್ಯಕ್ತಿಗಳು ನಮ್ಮ ಕುಟುಂಬಕ್ಕೆ ಸಂಬಂಧಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ನಾಲ್ಕು ಜನರಿಗೆ ಒಂದೇ ಸಮಯದಲ್ಲಿ ಮಂಜೂರಾಗಿರುವುದನ್ನು ತೋರಿಸಲು ಹಾಜರುಪಡಿಸಿರುತ್ತೇನೆ ಎನ್ನುವರು. ಕುಳ್ಳದಾಸಯ್ಯನಿಗೆ ಮಂಜೂರಾಗಿರುವ ಬಗ್ಗೆ ಮಂಜೂರಾತಿ ಪತ್ರವನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಮಂಜೂರಾತಿ ಪತ್ರ ಲಭ್ಯವಿಲ್ಲದಿದ್ದರಿಂದ ತಹಶೀಲ್ದಾರ್ ರವರು ಮಂಜೂರಾಗಿರುವ ಬಗ್ಗೆ ದೃಢೀಕರಣ ಪತ್ರ ನೀಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎನ್ನುವರು. ನಿಪಿ27 ರ ನಕಾಶೆಯ ಪ್ರಕಾರ ಅನುಭವದಲ್ಲಿರುವವರ ಪಟ್ಟಿ ಇರುವುದಿಲ್ಲ. ನಿಪಿ28 ರಲ್ಲಿ ನನ್ನ ತಂದೆಯ ಹೆಸರು ಮತ್ತು ಆಸ್ತಿಯ ಸರ್ವೆ ನಂಬರ್ ನಮೂದಾಗಿರುವುದಿಲ್ಲ. ನಿಪಿ29 ರ ವರದಿಯ ಪ್ರಕಾರ ಆಸ್ತಿ ಮಂಜೂರಾಗಿರುವ ಬಗ್ಗೆ ದಾಖಲೆ ಇರುವುದಿಲ್ಲ. ನಿಪಿ30 ರ ಪ್ರಕಾರ ಯಾವ ಆದೇಶವಾಗಿರುತ್ತದೆ ಎಂದು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಿಪಿ31 ರಲ್ಲಿ ಯಾವ ಸರ್ವೆ ನಂಬರಿಗೆ ಸಂಬಂಧಿಸಿದಂತೆ ಆದೇಶವಾಗಿರುತ್ತದೆ ಎಂದು ನಮೂದು ಇರುವುದಿಲ್ಲ. ನಿಪಿ32 ರಿಂದ ನಿಪಿ40 ದಾಖಲೆಗಳು ನನ್ನ ತಂದೆಗೆ ಸಂಬಂಧಪಟ್ಟ ದಾಖಲೆಯಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನನ್ನ ತಂದೆಗೆ ಆಸ್ತಿ ಮಂಜೂರಾದಾಗ ಸದರಿ ವ್ಯಕ್ತಿಗಳಿಗೂ ಸಹ ಆಸ್ತಿ ಮಂಜೂರಾಗಿದ್ದು ಅದನ್ನು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ನಿಪಿ32 ರಿಂದ ನಿಪಿ40 ದಾಖಲೆಗಳ ಪ್ರಕಾರ ಆಸ್ತಿ ಮಂಜೂರಾಗಿರುವಂತೆ ನಿಮ್ಮ ತಂದೆಗೂ ಸಹ ಆಸ್ತಿ ಮಂಜೂರಾಗಿರುವ ಬಗ್ಗೆ ದಾಖಲಾತಿ ಇರುತ್ತದಾ ಎಂದರೆ ಸಾಕ್ಷಿದಾರರು ದಾಖಲೆ ಇದ್ದು ಅದು ಮಿಸ್‌ಪ್ಲೇಸ್ ಆಗಿರುತ್ತದೆ ಎನ್ನುವರು. ನಾನು ಹಾಜರುಪಡಿಸಿರುವ ನಿಪಿ32 ರಿಂದ ನಿಪಿ40 ದಾಖಲೆಗಳು ಒಂದೇ ಕಡತದಲ್ಲಿರುವ ದಾಖಲೆಗಳು ಎಂದರೆ ಸರಿ. ನನ್ನ ತಂದೆಗೆ ಯಾವುದೇ ಆಸ್ತಿಯು ಮಂಜೂರಾಗಿರುವುದಿಲ್ಲ ಮತ್ತು ನಾವು ಯಾವುದೇ ಆಸ್ತಿಯ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗೆ ಸಂಬಂಧಿಸಿರದ ನಿಪಿ32 ರಿಂದ ನಿಪಿ40 ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.